# ನೇಮಕಾತಿ ರದ್ಧತಿ ಪ್ರಕಟಣೆ

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ

**ಅಧಿಸೂಚನೆ ಸಂಖ್ಯೆಃ ಎಡಿಎಂ/17/2026, ರಾಮನಗರ, ದಿನಾಂಕಃ 14.10.2026.**

**ವಿಷಯಃ** ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರದ ನ್ಯಾಯಾಂಗ ಘಟಕದಲ್ಲಿ ಸೃಜನೆಯಾಗಿದ್ದ ಹೊಸ ನ್ಯಾಯಾಲಯಗಳಿಗೆ ಸಂಬಂಧಪಟ್ಟಂತೆ ದಿನಾಂಕಃ 08.01.2019 ರಂದು ಹೊರಡಿಸಿದ್ದ ನೇರ ನೇಮಕಾತಿ ಅಧಿಸೂಚನೆಗಳಾದ ಶೀಘ್ರಲಿಪಿಗಾರರು ಹುದ್ದೆಯ - ಎಡಿಎಂ/23/2018, ಬೆರಳಚ್ಚುಗಾರರು ಹುದ್ದೆಯ – ಎಡಿಎಂ/24/2018 ಮತ್ತು ಜವಾನರು ಹುದ್ದೆಯ – ಎಡಿಎಂ/25/2018 ಇವುಗಳನ್ನು ರದ್ದು ಮಾಡುವ ಕುರಿತು.

**ಉಲ್ಲೇಖ :** 1. ಈ ಕಛೇರಿ ಅಧಿಸೂಚನೆ ಸಂಖ್ಯೆಃ ಎಡಿಎಂ/23/2018, ಎಡಿಎಂ/24/2018, ಎಡಿಎಂ/25/2018, ದಿನಾಂಕಃ 08.01.2019.
2. ಈ ಕಛೇರಿ ಪತ್ರ ಸಂಖ್ಯೆಃ ಎಡಿಎಂ/422/2026, ದಿನಾಂಕಃ 27.08.2026.
3. ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆಃ ಡಿ.ಜೆ.ಎ -34 (26) / 2021, ದಿನಾಂಕಃ11.09.2026.

* * * * *

ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ಘಟಕದಲ್ಲಿ ಸರ್ಕಾರಿ ಆದೇಶ ಸಂಖ್ಯೆಃ ಎಲ್‌ಎಡಬ್ಲ್ಯೂ 137 ಎಲ್‌ಸಿಇ 2014, ದಿನಾಂಕಃ 28.03.2016 ರ ಅನ್ವಯ ಸೃಜನೆಯಾಗಿದ್ದ ಹೊಸ ನ್ಯಾಯಾಲಯಗಳಿಗೆ ಸಂಬಂಧಪಟ್ಟಂತೆ ವಿವಿಧ ವೃಂದಗಳ ನೇರ ನೇಮಕಾತಿಗಾಗಿ ಈ ಕೆಳಕಂಡ ಅಧಿಸೂಚನೆಗಳನ್ನು ಹೊರಡಿಸಲಾಗಿತ್ತು.

| ಕ್ರಮ ಸಂಖ್ಯೆ | ಹುದ್ದೆ ಮತ್ತು ಹುದ್ದೆಯ ಸಂಖ್ಯೆಗಳು | ನೇಮಕಾತಿ ಅಧಿಸೂಚನೆಗಳ ಸಂಖ್ಯೆ ಮತ್ತು ದಿನಾಂಕ |
|---|---|---|
| 1 | ಶೀಘ್ರಲಿಪಿಗಾರರು - 06 | ADM/23/2018, Dated: 08.01.2019 |
| 2 | ಬೆರಳಚ್ಚುಗಾರರು - 06 | ADM/24/2018, Dated: 08.01.2019 |
| 3 | ಜವಾನರು - 12 | ADM/25/2018, Dated: 08.01.2019 |

ಈ ಮೇಲ್ಕಂಡ ಅಧಿಸೂಚನೆಗಳನ್ನು ಕ್ರಮ ಸಂಖ್ಯೆಃ 3 ರಲ್ಲಿ ಉಲ್ಲೇಖಿಸಿರುವ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರ ಪತ್ರದನ್ವಯ ಈ ಮೂಲಕ ರದ್ದುಗೊಳಿಸಲಾಗಿದೆ.

**(ಮಂಜಪ್ಪ ಹನಮಂತಪ್ಪ ಅಣ್ಣಯ್ಯನವರ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಂಗಳೂರು ದಕ್ಷಿಣ ಜಿಲ್ಲೆ,
ರಾಮನಗರ.

Prl District and Sessions Judge
Ramanagara.

<u>ನಕಲು ಪ್ರತಿಯನ್ನು :-</u>

ವಿಲೇಖನಾಧಿಕಾರಿಗಳು, ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು ರವರ ಮಾಹಿತಿಗಾಗಿ ಮುಖಪತ್ರದೊಂದಿಗೆ ಸಲ್ಲಿಸಲಾಗಿದೆ.

**<u>ಈ ಅಧಿಸೂಚನೆಯನ್ನು ತಮ್ಮ ಕಛೇರಿ ಸೂಚನಾ ಫಲಕದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲು ಕೋರಿ ಈ ಕೆಳಗಿನವರಿಗೆ ರವಾನಿಸಿದೆ.</u>**

1. ಪ್ರಧಾನ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರು, ಬೆಂಗಳೂರು ನಗರ ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ, ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ಬಿಜಾಪುರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ ಮಂಗಳೂರು, ದಾವಣಗೆರೆ, ಧಾರವಾಡ, ಗದಗ, ಕಲಬುರಗಿ, ಹಾವೇರಿ, ಕೊಡಗು (ಮಡಿಕೇರಿ), ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರ ಕನ್ನಡ ಕಾರವಾರ, ಹಾಸನ, ಕೋಲಾರ, ಯಾದಗಿರಿ, ವಿಜಯನಗರ ಇವರಿಗೆ ಮಾಹಿತಿ ಮತ್ತು ವ್ಯಾಪಕ ಪ್ರಚಾರಕ್ಕಾಗಿ.
2. 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ರಾಮನಗರ, ಪೀಠಾಸೀನ ಕನಕಪುರ.
3. ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ರಾಮನಗರ.
4. ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.
5. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಕನಕಪುರ.
6. ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಮಾಗಡಿ.
7. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರಾಮನಗರ/ಚನ್ನಪಟ್ಟಣ/ ಕನಕಪುರ/ ಮಾಗಡಿ.
8. ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಹೊರವಲಯ ಮುದ್ರಣಾಲಯ, ಮೈಸೂರು ರಸ್ತೆ, ಬೆಂಗಳೂರು ಇವರಿಗೆ-ಕರ್ನಾಟಕ ರಾಜ್ಯ ವಾರ್ತಾ ಪತ್ರದಲ್ಲಿ ಪ್ರಕಟಿಸುವ ಸಲುವಾಗಿ. (ದ್ವಿಪ್ರತಿಯಲ್ಲಿ)
9. ಆಯುಕ್ತರು, ವಾರ್ತಾ ಇಲಾಖೆ, ನಂ.17, ಭಗವಾನ್ ಮಹಾವೀರ್ (ಇನ್‌ಫ್ಯಾಂಟ್ರಿ) ಜೈನ್ ರಸ್ತೆ, ಬೆಂಗಳೂರು-560001 ಇವರಿಗೆ-ರಾಜ್ಯದ ದಿನಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರಕ್ಕಾಗಿ ಪ್ರಕಟಿಸಲು ಕೋರಿ. (ದ್ವಿಪ್ರತಿಯಲ್ಲಿ)
10. ಉಪ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ವಾರ್ತಾ ಭವನ, ರಾಮನಗರ ಇವರಿಗೆ-ಜಿಲ್ಲೆಯ ಸ್ಥಳೀಯ ದಿನಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರಕ್ಕಾಗಿ ಪ್ರಕಟಿಸಲು ಕೋರಿ.
11. ಉದ್ಯೋಗಾಧಿಕಾರಿ, ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಹೆಚ್.35, ಪಿಡಬ್ಲ್ಯೂ ಡಿ ಗೆಸ್ಟ್ ಹೌಸ್, ರಾಮನಗರ.
12. ಸಾಫ್ಟ್ ವೇರ್ ಟೆಕ್ನೀಷಿಯನ್, ಕಂಪ್ಯೂಟರ್ ವಿಭಾಗ, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ ಇವರಿಗೆ ಬೆಂಗಳೂರು ದಕ್ಷಿಣ ಜಿಲ್ಲಾ ನ್ಯಾಯಾಲಯದ ಜಾಲತಾಣದಲ್ಲಿ ಪ್ರಕಟಣೆಗಾಗಿ ಹಾಗೂ ಕ್ರಮ ಸಂಖ್ಯೆ: 1 ರಿಂದ 7ರವರೆಗಿನ ನ್ಯಾಯಾಲಯಗಳಿಗೆ/ಕಛೇರಿಗೆ ಇ-ಮೇಲ್ ಮೂಲಕ ಕಳುಹಿಸುವ ಸಲುವಾಗಿ.
13. ಕಛೇರಿಯ ಸೂಚನಾ ಫಲಕಕ್ಕೆ.
14. ಕಛೇರಿಯ ನಕಲು.
15. ಹೆಚ್ಚಿನ ಪ್ರತಿ.